ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಹೌದು. ಸೇತುವೆ ಇಕ್ಕಟ್ಟಾಗಿರುವುದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು.

ಆ) ಇದೊಂದು ಬೃಹತ್ ಅಂದಾಜು ವೆಚ್ಚದ ಸೇತುವೆ ಕಾಮಗಾರಿಯಾಗಿದ್ದು, ಸುಮಾರು ರೂ. 120.00 ಲಕ್ಷಗಳಾಗಬಹುದು. ಆದ್ದರಿಂದ ಈ ಕಾಮಗಾರಿಯನ್ನು 'ಕೇಂದ್ರ ರಸ್ತೆ ನಿಧಿ'ಯಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಲಾಗುವುದು.

ಇ) ಕಾಮಗಾರಿ ಅಂದಾಜುವೆಚ್ಚ ರೂ. 120.00 ಲಕ್ಷಗಳು. ಕೇಂದ್ರ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಲಾಗುವುದು. ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾದ ಕೂಡಲೇ ಮುಂದಿನ ಕ್ರಮ ಕೈಗೊಳ್ಳಲಾಗುವುದು.

## ಕೃಷ್ಣಾ ಮೇಲ್ದಂಡೆ ಯೋಜನೆ

**372 (386):** ಶ್ರೀ ಬಿ. ಹಂಪನಗೌಡ, (ಸಿಂಧನೂರು):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಯೋಜನೆಗೆ ಯಾವ ವರ್ಷದಲ್ಲಿ ಶಂಕುಸ್ಥಾಪನೆ ಮಾಡಲಾಗಿದೆ;

ಆ) ಶಂಖುಸ್ಥಾಪನೆ ಮಾಡಿದಾಗ ಆ ಯೋಜನೆಗೆ ತಗಲಿದ ವೆಚ್ಚವೆಷ್ಟು ಮತ್ತು 93ನೇ ಸಾಲಿನವರೆಗೆ ಎಷ್ಟು ಹಣ ಕೃಷ್ಣಾ ಯೋಜನೆಗೆ ಖರ್ಚಾಗಿದೆ;

ಇ) ಈ ಯೋಜನೆಯಿಂದ ಇಲ್ಲಿಯವರೆಗೆ ಎಷ್ಟು ಎಕರೆ ಪ್ರದೇಶ ನೀರಾವರಿಯಾಗಿದೆ ಹಾಗೂ ಇನ್ನೂ ಎಷ್ಟು ಎಕರೆ ನೀರಾವರಿ ಆಗಬೇಕಾಗಿದೆ;

ಈ) ಕೃಷ್ಣಾ ಎಡದಂಡೆ ಮುಖ್ಯ ಕಾಲುವೆ ಯಾವ ಹಂತದಲ್ಲಿದೆ ಮತ್ತು ಕಾಲುವೆಗೆ ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ ಹಾಗೂ ಯಾವಾಗ ಅದರ ಕಾಮಗಾರಿ ಕೆಲಸ ಮುಗಿಯುತ್ತದೆ ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) 1964

ಆ) ಶಂಖುಸ್ಥಾಪನೆ ಮಾಡುವವರೆಗೆ ವೆಚ್ಚವಾದ ಮೊತ್ತ 31.58 ಲಕ್ಷ ರೂ.ಗಳು. 1993ನೇ ಜನವರಿ ಅಂತ್ಯದವರೆಗೆ ಆಗಿರುವ ವೆಚ್ಚ ಸುಮಾರು 815 ಕೋಟಿ ರೂ.ಗಳು.

ಇ) ಯೋಜನೆಯ ಮೊದಲ ಘಟ್ಟದಲ್ಲಿ 1993ರ ಜನವರಿ ಅಂತ್ಯದವರೆಗೆ 1,36,685 ಹೆಕ್ಟೇರ್ ಪ್ರದೇಶಕ್ಕೆ (3,41,000 ಎಕರೆ) ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. ಮೊದಲ ಘಟ್ಟದಿಂದ ಇನ್ನೂ ಸುಮಾರು 2,88,315 ಹೆಕ್ಟೇರ್ ಪ್ರದೇಶಕ್ಕೆ (7,09,000 ಎಕರೆ) ನೀರಾವರಿ ಸಾಮರ್ಥ್ಯ ಕಲ್ಪಿಸಬೇಕಾಗಿದೆ.

ಈ) ಕೃಷ್ಣಾ ಮೇಲ್ದಂಡೆ ಯೋಜನೆಯ ಮುಖ್ಯ ಎಡದಂಡೆ ಕಾಲುವೆಯಾದ ನಾರಾಯಣಪುರ ಎಡದಂಡೆ ಕಾಲುವೆಯು ಸಂಪೂರ್ಣಗೊಂಡಿದ್ದು ಅದರ ಶಾಖಾ ಕಾಲುವೆಗಳಾದ ಶಹಾಪುರ ಶಾಖಾ ಕಾಲುವೆ, ಇಂಡಿ ಶಾಖಾ ಕಾಲುವೆ, ಮುದ್‌ಬಾಳ್ ಶಾಖಾ ಕಾಲುವೆ ಮತ್ತು ಜೇವರ್ಗಿ ಶಾಖಾ ಕಾಲುವೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಕಾಲುವೆಯ ಕೆಲಸಗಳಿಗಾಗಿ ಇಲ್ಲಿಯವರೆಗೆ

ಸುಮಾರು 432 ಕೋಟಿ ರೂ.ಗಳು ವೆಚ್ಚವಾಗಿದ್ದು ಅವುಗಳನ್ನು 1996ನೇ ಇಸವಿಯ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

## ಮೈಸೂರು ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆ ಬಗ್ಗೆ ಬಂದ ಅರ್ಜಿಗಳು

**373 (1580):** ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):–

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಗಾಗಿ ಬಂದಿರತಕ್ಕ ಅರ್ಜಿಗಳೆಷ್ಟು;

ಆ) ಇದರಲ್ಲಿ ಕಾರ್ಯರೂಪಕ್ಕೆ ಬಂದಿರುವುದೆಷ್ಟು; ಇನ್ನೂ ಕಾರ್ಯರೂಪಕ್ಕೆ ಬರಬೇಕಾಗಿರುವುದೆಷ್ಟು;

ಇ) ಇದರಲ್ಲಿ ಟಿ. ನರಸೀಪುರ ಕ್ಷೇತ್ರಕ್ಕೆ ಸೇರಿದ ಫಲಾನುಭವಿಗಳೆಷ್ಟು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) 60

| | |
|---|---|
| ಆ) 1. ಕಾರ್ಯರೂಪಕ್ಕೆ ಬಂದಿರುವ ಯೋಜನೆಗಳ ಸಂಖ್ಯೆ | 5 |
| 2. ಕಾರ್ಯರೂಪಕ್ಕೆ ಬರಬೇಕಾಗಿರುವ ಯೋಜನೆಗಳ ಸಂಖ್ಯೆ | 30 |
| 3. ಅಶಕ್ಯವೆಂದು ಕೈಬಿಡಲಾದ ಯೋಜನೆಗಳ ಸಂಖ್ಯೆ | 25 |

ಇ) ಟಿ. ನರಸೀಪುರ ಕ್ಷೇತ್ರಕ್ಕೆ ಸಂಬಂಧಿಸಿದಂತೆ 5 ಏತ ನೀರಾವರಿ ಯೋಜನೆಗಳ ಪ್ರಾಥಮಿಕ ವರದಿ ತಯಾರಿಸಿದ್ದು ಈ ವರದಿಯ ಪ್ರಕಾರ 3 ಯೋಜನೆಗಳು ಶಕ್ಯವೆಂದು ಕಂಡುಬಂದಿದೆ. ಈ ಯೋಜನೆಗಳ ವಿವರವಾದ ಸರ್ವೆ ಕಾರ್ಯದ ನಂತರ ಫಲಾನುಭವಿಗಳ ಸಂಖ್ಯೆ ತಿಳಿಯುತ್ತದೆ.

## ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕ್ ನೆರವು

**377 (114):** ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):–

ಮಾನ್ಯ ಭಾರಿ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕ್‌ನವರು ಹಣಕಾಸಿನ ನೆರವು ನಿಲ್ಲಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣವೇನು;

ಇ) ಮತ್ತೆ ವಿಶ್ವಬ್ಯಾಂಕ್ ನೆರವು ಪಡೆಯಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಓಂ ಪ್ರಕಾಶ್ ಕಣಗಲಿ (ಭಾರಿ ನೀರಾವರಿ ರಾಜ್ಯ ಮಂತ್ರಿಗಳು):–

ಅ) ನವೆಂಬರ್ 1992ರಲ್ಲಿ ವಿಶ್ವಬ್ಯಾಂಕ್‌ನವರು ನೆರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದು, ದಿನಾಂಕ 1.3.93ರಿಂದ ನೆರವನ್ನು ಪುನರಾರಂಭಿಸಿರುತ್ತಾರೆ.

ಆ) ಪುನರ್ವಸತಿ ಮತ್ತು ಪುನಶ್ಚೇತನ ಕಾರ್ಯಕ್ರಮದ ಅನುಷ್ಠಾನದಲ್ಲಿ ಆದ ವಿಳಂಬದಿಂದಾಗಿ ವಿಶ್ವಬ್ಯಾಂಕ್‌ನವರು ನೆರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದರು.